## ಇಲ್ಲಿಯವರೆಗೆ...

ಕುಮುದ, ಅಕ್ಷಯಕುಮಾರ ದಂಪತಿಯ ಮಗ ಕೌಶಿಕ. ನಗರದಲ್ಲಿರುವ ಆ ಪುಟ್ಟ ಬಾಲಕನಿಗೆ ಕಾಡು, ಪ್ರಾಣಿಗಳು, ಪರಿಸರ, ಹಾಡು ಎಂದರೆ ಇಷ್ಟ. ಆದರೆ, ಅವನ ಅಪ್ಪ ಮಗ ಮುಂದೆ ಡಾಕ್ಟರು, ಎಂಜಿನಿಯರ್ ಆಗಬೇಕು ಎಂದು ಮಗನ ಕಲಿಕೆಯ ಮೇಲೆ ಇನ್ನಿಲ್ಲದ ಒತ್ತಡಹಾಕುತ್ತಾನೆ. ಅಪ್ಪನ ಒತ್ತಡ ತಾಳಲಾಗದೆ ಮಾನಸಿಕವಾಗಿ ಬಳಲಿದ ಮಗು ಆಸ್ಪತ್ರೆ ಸೇರುತ್ತದೆ...

ರಾಮಯ್ಯಾಳ್ವರಿಗಾಗಲೀ, ಕುಮುದಳಿಗಾಗಲೀ ತಮ್ಮ ಬಾಲ್ಯದ 'ಸೊಪ್ಪಿ' ಇಲ್ಲಿ... ಈ 'ರೂಪ'ದಲ್ಲಿ ಈ 'ಗಳಿಗೆ'ಯಲ್ಲಿ 'ಇಲ್ಲಿ' ಕಾಣಿಸಿಕೊಳ್ಳುತ್ತಾಳೆ ಎಂದು ಕನಸು ಮನಸಲ್ಲಿಯೂ ಎಣಿಸಿರಲಿಲ್ಲ. ಗೊತ್ತು ಗುರುತು ಇಲ್ಲದ ಈ ಆಸ್ಪತ್ರೆಯಲ್ಲಿ ತಮ್ಮ ಅಂಗಳದಲ್ಲಿ ಬೆಳೆದ 'ಆ ಮಗು' ಹೀಗೆ ಕಾಣಿಸಿಕೊಳ್ಳುವುದೆಂದರೆ ಅದು ತನ್ನ ಚಾವಡಿಯ ದೈವ ಜುಮಾದಿಯ ದಯೆ ಅಲ್ಲದೇ, ಬೇರೇನೂ ಅಲ್ಲ ಎಂದು—ಒಂದು ಕ್ಷಣ ಭಾವುಕರಾದ ರಾಮಯ್ಯಾಳ್ವರು, ಕಣ್ತುಂಬಿಕೊಂಡು, ಗದ್ಗದಿತರಾಗಿ ಮತ್ತು ದೀನರಾಗಿ ತಮ್ಮ ಮೊಮ್ಮಗುವಿನ ಸ್ಥಿತಿಯನ್ನು ಆಕೆಯಲ್ಲಿ ನಿವೇದಿಸಿಕೊಳ್ಳುತ್ತಲೇ... ಮಗು ಕೌಶಿಕನ ಸ್ಥಿತಿಯನ್ನು ಒಂದರೆ ಕ್ಷಣ... ನೆನಪಿಸಿಕೊಂಡು ಒಂದು ಹಂತದಲ್ಲಿ ಉಮ್ಮಳಿಸಿ ಅತ್ತೇ ಬಿಟ್ಟರು. ಅಷ್ಟು ಹೊತ್ತಿಗಾಗಲೇ, ಕುಮುದಳು (ಕಾರಿಡಾರಿನಲ್ಲಿದ್ದ) ತನ್ನ ಮಗುವಿನ ಸ್ಥಿತಿಯನ್ನು ನೆನಪಿಸಿಕೊಳ್ಳುತ್ತ... ಬೆಂಚಲ್ಲಿ ಕುಸಿದು ಕುಳಿತು ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಆದರೆ, ಆಕಸ್ಮಿಕವಾಗಿ ತನಗೆದುರಾದ ಈ ದುರ್ಭರ 'ಪರಿಸ್ಥಿತಿ'ಯನ್ನು ತಕ್ಷಣ ನಿಭಾಯಿಸಲಾಗದೆ, ಒಂದರೆ ಗಳಿಗೆ ಭಾವುಕಳಾಗಿ ಅಧೀರಳಾದ ಡಾ. ಸ್ವಪ್ನ ಹೆಗ್ಡೆ, ಮರುಕ್ಷಣದಲ್ಲೆ ತನ್ನನ್ನು ತಾನೇ ಸಾವರಿಸಿಕೊಂಡವಳೇ, 'ನಾನೀಗ್ಲೇ ಡಾ. ವಿನಾಯಕ್ ಅವರ ಜೊತೆ ಮಗುವಿನ ಕಂಡೀಷನ್ ಏನು ಅಂತ ಡಿಸ್ಕಸ್ ಮಾಡ್ತೇನೆ... ನಿಮ್ಮ ಜೊತೆಲಿ ನಾನಿದ್ದೇನೆ. ಏನೇನೂ ಭಯ ಬೇಡ. ಮನಸ್ಸು ಗಟ್ಟಿ ಮಾಡಿಕೊಳ್ಳಿ ಅಷ್ಟೆ' ಎಂದು ಮಾವ ರಾಮಯ್ಯಾಳ್ವರನ್ನು ಎಡಗೈಯಿಂದ ಅಪ್ಪಿಕೊಂಡು ಸಮಾಧಾನಿಸಿದ್ದಳು.

ಕಾರಿಡಾರ್‌ನಲ್ಲಿದ್ದ ಅವರಿಬ್ಬರನ್ನೂ ಸಮಾಧಾನಿಸಿದ ಡಾ. ಸ್ವಪ್ನ ಹೆಗ್ಡೆಯು, ಡಾ. ವಿನಾಯಕ್ ಅವರ ಕೊಠಡಿಗೆ ಹೊಕ್ಕವಳೇ ಶಿಷ್ಟಾಚಾರದಂತೆ ಉಭಯ ಕುಶಲೋಪರಿಯನ್ನು ಮುಗಿಸಿದೊಡನೆ, ತಾನೇ ಮುಂದಾಗಿ ಮಾತಿಗೆ ತೊಡಗಿದ್ದಳು. ಹೊರಗೆ ಕಾರಿಡಾರ್‌ನಲ್ಲಿ ತನಗೆ ಭೇಟಿಯಾದ ರಾಮಯ್ಯಾಳ್ವರ ಮೊಮ್ಮಗನ ಸಮಸ್ಯೆಯ ಬಗ್ಗೆ ಮಾತನ್ನೆತ್ತಿದ್ದಳು. ಡಾ. ವಿನಾಯಕ್ ಬಯಸಿದ್ದೂ ಆ ವಿಚಾರವನ್ನೇ. ರಾಮಯ್ಯಾಳ್ವರಿಗೆ ತಾನು ಹೇಗೆ ಸಂಬಂಧಿ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸುತ್ತ, ಕೌಶಿಕನ ಅನಾರೋಗ್ಯ ಮತ್ತು ಚಿಕಿತ್ಸೆಯ ಬಗ್ಗೆ ತಾನೇ ಡಾ. ವಿನಾಯಕ್ ಅವರಲ್ಲಿ ಚರ್ಚಿಸುತ್ತ, ಆತನ ಸಮಸ್ಯೆ ಎಲ್ಲಿರಬಹುದು ಎಂಬುದನ್ನು ತಾನೇ ಅವರಿಗೆ ವಿವರಿಸಿದ್ದಳು. 'ಇದು ಸೈಕಿಯಾಟ್ರಿ ಕೇಸ್ ಸರ್. ಇದರಲ್ಲಿ ಅನುಮಾನವೇ ಇಲ್ಲ' ಎಂದು ಆ ವೈದ್ಯರಿಗೆ ಸಮಜಾಯಿಷಿ ನೀಡುತ್ತಾ, ಮುಂದಿನ ಚಿಕಿತ್ಸೆಯನ್ನು